**ದಿನಾಂಕಃ 14.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ತಮ್ಮಣ್ಣ ಮತ್ತು ರಾಮಯ್ಯ ರವರ ಸ್ವತ್ತು ಇದೆ ಎಂದರೆ ಸುಳ್ಳು. ದಾವಾ ಸ್ವತ್ತಿನ ಪಶ್ಚಿಮಕ್ಕೆ ಮೋಟಪ್ಪ ರವರ ಸ್ವತ್ತು ಇದೆ ಎಂದರೆ ಸುಳ್ಳು. ದಾವಾ ಸ್ವತ್ತಿನ ದಕ್ಷಿಣಕ್ಕೆ ಮುನಿಸ್ವಾಮಿ ರವರ ಸ್ವತ್ತು ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ವಾದಿಯರ ತಾಯಿ 1963 ರಲ್ಲಿ ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಕ್ರಯ ಪತ್ರದಲ್ಲಿ ಮೇಲೆ ಸೂಚಿಸಿದ ಚೆಕ್ಕುಬಂದಿ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದಲ್ಲಿ ನಮೂದಿಸಿದ ಚೆಕ್ಕುಬಂದಿ ಹಾಗೂ ದಾವೆಯ ಅನುಸೂಚಿಯಲ್ಲಿ ನಮೂದಿಸಿರುವ ಚೆಕ್ಕುಬಂದಿ ಎರಡೂ ಒಂದೇ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ವಾದಿಯರಿಗೆ ಸಂಬಂಧಿಕನಲ್ಲ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ವಾದಿಯರಿಂದ ಖರೀದಿಸಿಲ್ಲ ಎಂದರೆ ಸರಿ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ವಿಚಾರಗಳು ನನಗೆ ಗೊತ್ತು. ನಾನು ಸದರಿ ಪ್ರತಿವಾದ ಪತ್ರದಲ್ಲಿ ವಾದಿಯು ದಾವೆಯಲ್ಲಿ ಕ್ಲೇಮು ಮಾಡುತ್ತಿರುವ ಸ್ವತ್ತು ಸಂ.159 ರ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ.

ನಾನು ನನ್ನ ಪ್ರತಿವಾದ ಪತ್ರದಲ್ಲಿ ಸ್ವತ್ತು ಸಂ.187/1 ನನ್ನ ಸ್ವತ್ತು ಎಂದು ಕ್ಲೇಮು ಮಾಡುತ್ತಿದ್ದೇನೆ ಎಂದರೆ ಸರಿ. ಸ್ವತ್ತು ಸಂ.187/1 ರ ಸ್ವತ್ತಿನ ಸಂಬಂಧ ನಾನು

ವಾದಿಯರ ವಿರುದ್ಧ ಮೂಲ ದಾವೆ ಸಂ.5559/2006 ರಲ್ಲಿ ಒಂದು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ದಾಖಲೆಯು ನಾನು ಸಲ್ಲಿಸಿದ್ದ ಮೂಲ ದಾವೆ ಸಂ.5559/2006 ರ ದಾವಾ ಪತ್ರದ ದೃಢೀಕೃತ ನಕಲು ಎಂದರೆ ಸರಿ. ಸಾಕ್ಷಿ ಒಪ್ಪಿಕೊಂಡ ದಾಖಲೆಯನ್ನು **ನಿಪಿ-27** ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ಈ ದಾವೆಯ ವಾದಿಗಳು ಕ್ರಮವಾಗಿ 4 ಮತ್ತು 5 ನೇ ಪ್ರತಿವಾದಿಗಳು ಎಂದರೆ ಸರಿ. ಸದರಿ ದಾವಾ ಪತ್ರದಲ್ಲಿ ಸ್ವತ್ತು ಸಂ.187/1 ರ ಚೆಕ್ಕುಬಂದಿಯನ್ನು ಅನುಸೂಚಿ-ಎಫ್ ನಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. ಆ ರೀತಿ ಚೆಕ್ಕುಬಂದಿಯನ್ನು ನಮೂದಿಸುವಾಗ ಸ್ವತ್ತು ಸಂ.187/1 ರ ಪೂರ್ವಕ್ಕೆ ಖಾಸಗಿ ಸ್ವತ್ತು, ಪಶ್ಚಿಮಕ್ಕೆ ಪ್ಯಾಸೇಜ್, ಉತ್ತರಕ್ಕೆ-ಸ್ವತ್ತು ಸಂ.187 ಹಾಗೂ ದಕ್ಷಿಣಕ್ಕೆ ಸ್ವತ್ತು ಸಂ.190 ಎಂದು ತೋರಿಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿ ಹಾಗೂ ನಿಪಿ-27 ರಲ್ಲಿ ಅನುಸೂಚಿ-ಎಫ್ ನಲ್ಲಿ ನಮೂದಿಸಿರುವ ಸ್ವತ್ತು ಸಂ.187/1 ರ ಚೆಕ್ಕುಬಂದಿ ಬೇರೆ ಬೇರೆ ಇದೆ ಎಂದರೆ ಸರಿ. ಸದರಿ ಎರಡು ಸ್ವತ್ತುಗಳು ಬೇರೆ ಬೇರೆ ಸ್ವತ್ತುಗಳು ಎಂದರೆ ಸರಿ. ನಾನು ಪ್ರತಿವಾದ ಪತ್ರದ 10 ನೇ ಪ್ಯಾರದಲ್ಲಿ ವಾದಿಯರು ಸ್ವತ್ತು ಸಂ.187/1 ನ್ನು ದಾವಾ ಸ್ವತ್ತಿನ ಒಂದು ಭಾಗವೆಂದು ಕ್ಲೇಮು ಮಾಡುತ್ತಿದ್ದಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ವಾದಿಯರು ಅವರ ದಾವಾ ಪತ್ರದಲ್ಲಿ ಸ್ವತ್ತು ಸಂ.187/1 ರ ಸ್ವತ್ತು ದಾವಾ ಸ್ವತ್ತಿನ ಒಂದು ಭಾಗವೆಂದು ಹೇಳಿರುವುದಿಲ್ಲ ಎಂದರೆ ಸರಿ. ಮೂಲ ದಾವೆ ಸಂ.5559/2006 ರ ದಾವೆ ವಜಾ ಆಗಿರುತ್ತದೆ. ಸದರಿ ದಾವೆಯಲ್ಲಿ ದಿನಾಂಕ 29.06.2006 ರಂದು ನ್ಯಾಯಾಲಯವು ನಾನು ಸ್ವತ್ತಿನ ಸ್ವಾಧೀನದಲ್ಲಿ ಇಲ್ಲವೆಂದು ಗಮನಿಸಿ ಪ್ರತಿವಾದಿಗಳಿಗೆ ಸಮನ್ಸ್ ಮತ್ತು ನೋಟೀಸು ಆದೇಶ ಮಾಡಿದ್ದು ತದನಂತರ

ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗುವ ಮೊದಲೇ ನಾನು ಸದರಿ ದಾವೆಯನ್ನು ನ್ಯಾಯಾಲಯದಲ್ಲಿ ಮೆಮೋ ಸಲ್ಲಿಸಿ ದಾವೆಯನ್ನು ವಾಪಸ್ಸು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸ್ವತ್ತು ಸಂ.187/1 ಸ್ವತ್ತಿಗೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಸ್ವತ್ತಿನ ಖಾತಾ ಸಂ.3959 ಇದ್ದು ಪೂರ್ವ ಪಶ್ಚಿಮ 82 ಅಡಿ ಹಾಗೂ ಉತ್ತರ ದಕ್ಷಿಣ 84 ಅಡಿ ಇರುತ್ತದೆ ಎಂದು ಹೇಳಲಾಗಿದೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಖಾಸಗಿ ಸ್ವತ್ತು, ಪಶ್ಚಿಮಕ್ಕೆ ಪ್ಯಾಸೇಜ್, ಉತ್ತರಕ್ಕೆ ಸ್ವತ್ತಿನ ಸಂ.187/1, ದಕ್ಷಿಣಕ್ಕೆ ಸ್ವತ್ತಿನ ಸಂ.190 ಇರುತ್ತದೆ ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ಕ್ರಯ ಪತ್ರವನ್ನು ಮುನಿಯಮ್ಮ ಉರುಫ್ ಮುಚ್ಚಮ್ಮ ಹಾಗೂ ಚಿಕ್ಕಮರಿಯಪ್ಪ ರವರು ಬರೆದುಕೊಟ್ಟಿರುವುದಾಗಿ ಹೇಳಲಾಗಿದೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಸದರಿ ಸ್ವತ್ತಿನ ಎಲ್ಲಾ ಮೂಲ ದಾಖಲಾತಿಗಳನ್ನು ನನಗೆ ನೀಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ದಿನಾಂಕ 03.03.2006 ರಂದು ಸದರಿ ಕ್ರಯ ಪತ್ರ ಬರೆದುಕೊಡಲಾಗಿದೆ ಎಂದು ಆ ಕ್ರಯ ಪತ್ರದಲ್ಲಿ ಹೇಳಲಾಗಿದೆ ಎಂದರೆ ಸರಿ. ಸ್ವತ್ತಿನ ಸಂ.187/1 ಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಮೂಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಡಿ-2 ರಲ್ಲಿ ಸ್ವತ್ತು ಸಂ.190, ಖಾತೆ ಸಂ.3924 ಎಂಬ ಸ್ವತ್ತಿನ ಸಂಬಂಧ ಬರೆದುಕೊಟ್ಟಿರುವುದಾಗಿ ನಮೂದಿಸಲಾಗಿದೆ ಎಂದರೆ ಸರಿ. ನಿಡಿ-2 ರಲ್ಲಿ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 25 ಅಡಿ ಹಾಗೂ ಉತ್ತರ ದಕ್ಷಿಣ 80 ಅಡಿ ಎಂದು

ನಮೂದಿಸಿದ್ದಾರೆ ಎಂದರೆ ಸರಿ. ನಿಡಿ-2 ರಲ್ಲಿ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ನಿವೇಶನ ಸಂ.187/1, ಪಶ್ಚಿಮಕ್ಕೆ ನಿವೇಶನ ಸಂ.193, ಉತ್ತರಕ್ಕೆ ಪ್ಯಾಸೇಜ್ ಮತ್ತು ದಕ್ಷಿಣಕ್ಕೆ ಸರ್ವೆ ನಂ.30/2 ರ ಖಾಸಗಿ ಸ್ವತ್ತು ಎಂದು ನಮೂದಿಸಲಾಗಿದೆ ಎಂದರೆ ಸರಿ. ದಿನಾಂಕ 04.10.2012 ರಂದು ನಿಡಿ-2 ರ ದಾಖಲೆಯನ್ನು ಬರೆದುಕೊಡಲಾಗಿದೆ ಎಂದರೆ ಸರಿ. ನಿಡಿ-2 ರ ದಾಖಲೆಯನ್ನು ಮುನಿಯಮ್ಮ, ಯಲ್ಲಮ್ಮ ಹಾಗೂ ಮಂಜು ಎನ್ನುವವರು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ನಿಡಿ-1 ಹಾಗೂ ನಿಡಿ-2 ರ ದಾಖಲೆಗಳನ್ನು ಬರೆದುಕೊಟ್ಟಿರುವವರು ಬೇರೆ ಬೇರೆ ವ್ಯಕ್ತಿಗಳು ಎಂದರೆ ಸರಿ. ಮೂಲ ದಾವೆ ಸಂ.5559/2006 ರ ಎಫ್ ಅನುಸೂಚಿಯಲ್ಲಿ ಸ್ವತ್ತು ಸಂ.187/1 ರ ಸ್ವತ್ತಿಗೆ ಹೇಳಿರುವ ಚೆಕ್ಕುಬಂದಿಗಳು, ನಿಡಿ-1 ರಲ್ಲಿ ನಮೂದಿಸಿರುವ ಚೆಕ್ಕುಬಂದಿಗಳು ಹಾಗೂ ನಿಡಿ-2 ರಲ್ಲಿ ನಮೂದಿಸಿರುವ ಚೆಕ್ಕುಬಂದಿಗಳು ಬೇರೆ ಬೇರೆ ಚೆಕ್ಕುಬಂದಿಗಳು ಎಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ ಸ್ವತ್ತು ಸಂ.187/1 ನನ್ನ ಮಾರಾಟಗಾರರಿಗೆ ಹೇಗೆ ಬಂತು ಎಂದು ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸ್ವತ್ತು ಸಂ.187/1 ನನ್ನ ಮಾರಾಟಗಾರರಿಗೆ ಹೇಗೆ ಬಂತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸ್ವತ್ತು ಸಂ.187/1 ರ ಸ್ವತ್ತಿಗೆ ಸಂಬಂಧಿಸಿದಂತೆ ಖಾತೆ ಮತ್ತು ತೆರಿಗೆ ಪಾವತಿಗಳ ಬಗ್ಗೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿವೇಶನ ಸಂ.187/1 ರ ಸ್ವತ್ತು ಎಲ್ಲಿ ಬರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಬಡಾವಣೆ ನಕ್ಷೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

1963 ರ ಕ್ರಯ ಪತ್ರವನ್ನು ಇಲ್ಲಿಯವರಗೂ ಯಾರು ಪ್ರಶ್ನಿಸಿಲ್ಲ ಎಂದರೆ ಸರಿ.

ವಾದಿಗಳೇ ದಾವಾ ಸ್ವತ್ತಿನ ಮಾಲೀಕರಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1963 ರಲ್ಲಿ ವಾದಿಯರ ತಾಯಿ ದಾವಾ ಸ್ವತ್ತನ್ನು ಖರೀದಿಸಿದಾಗಿನಿಂದ ಅದರಲ್ಲಿ ಮನೆ ಕಟ್ಟಿಕೊಂಡು ಅವರ ಕುಟುಂಬದವರೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅವರ ಹೆಸರೇ ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳಲ್ಲಿ ನಮೂದಾಗಿದ್ದು ಅವರೇ ದಾವಾ ಸ್ವತ್ತಿಗೆ ತೆರಿಗೆ ಪಾವತಿಸಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ನಾನು ವಾದಿಯರ ದಾವಾ ಸ್ವತ್ತಿನ ಸ್ವಾಧೀನಕ್ಕೆ ಅಡ್ಡಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳು ನನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಹಾಗೂ ಆ ಸಂಬಂಧ ನನ್ನನ್ನು ಕರೆಯಿಸಿ ಬುದ್ಧಿ ಹೇಳಿದ್ದರು ಎಂದರೆ ಸರಿಯಲ್ಲ. ವಾದಿಯರು ನನ್ನ ಸ್ವತ್ತಿನ ಉತ್ತರ ಭಾಗವನ್ನು ಒತ್ತುವರಿ ಮಾಡುತ್ತಿದ್ದಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರ ದಾವಾ ಸ್ವತ್ತಿನ ಸ್ವಾಧೀನಕ್ಕೆ ವಿನಾಕಾರಣ ಅಡ್ಡಿ ಪಡಿಸುತ್ತಿರುವುದರಿಂದ ವಾದಿಯರು ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.